ವಿ-72 (157)

**ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಡಾ: ವೈ.ಎ.ನಾರಾಯಣಸ್ವಾಮಿ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

| | |
|---|---|
| ವಿಷಯ: | ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ, ಹಾಲಿ ಖಾಲಿಯಿರುವ ಸುಮಾರು 300 ಹುದ್ದೆಗಳನ್ನು ಅನುದಾನಕ್ಕೊಳಪಡಿಸದೇ ಇರುವುದರಿಂದ, ಸದರಿ ಸಂಸ್ಥೆಗಳಲ್ಲಿ ಗುಣಮಟ್ಟದ ತರಬೇತಿ ನೀಡುವಲ್ಲಿ ತೊಂದರೆ ಅನುಭವಿಸುತ್ತಿರುವುದರಿಂದ, ಈ ಕೂಡಲೇ ಸುಮಾರು 140 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿಯಿರುವ ಸುಮಾರು 300 ವಿವಿಧ ಹುದ್ದೆಗಳನ್ನು (Principal, TO, JTO, Non-teaching) ಅನುದಾನಕ್ಕೊಳಪಡಿಸುವ ವಿಷಯವನ್ನು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ. |

*******

ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅನುಬಂಧದಲ್ಲಿ ಲಗತ್ತಿಸಿರುವಂತೆ ಸುಮಾರು 221 ವಿವಿಧ ವೃಂದದ ಹುದ್ದೆಗಳು (ಪ್ರಾಚಾರ್ಯರು, ತರಬೇತಿ ಅಧಿಕಾರಿ, ಕಿರಿಯ ತರಬೇತಿ ಅಧಿಕಾರಿ, ಬೋಧಕೇತರ) ಖಾಲಿ ಇರುತ್ತವೆ. ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಅದನ್ನು ಅನುದಾನ ಸಂಹಿತೆ ಹಾಗೂ ಸರ್ಕಾರದ ಚಾಲ್ತಿ ನಿಯಮಗಳನ್ವಯ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮವಹಿಸಲಾಗುವುದು.

* * * *

**ಕೌಉಜೀಇ 102 ಕೈತಪ್ರ 2021**

(ಡಾ.ಸಿ.ಎನ್.ಅಶ್ವತ್ಥ ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

# ಅನುಬಂಧ

## ಖಾಸಗಿ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಪ್ರಾಚಾರ್ಯರು | 41 |
| 2 | ತರಬೇತಿ ಅಧಿಕಾರಿ | 17 |
| 3 | ಕಿರಿಯ ತರಬೇತಿ ಅಧಿಕಾರಿಗಳ ಖಾಲಿ ಹುದ್ದೆಗಳ ವಿವರ | |
| | ಫಿಟ್ಟರ್ | 41 |
| | ಎಲೆಕ್ಟ್ರೀಷಿಯನ್ | 23 |
| | ಎಲೆಕ್ಟ್ರಾನಿಕ್ ಮೆಕ್ಯಾನಿಕ್ | 13 |
| | ಡ್ರಾಫ್ಟ್‌ಮೆನ್ ಮೆಕ್ಯಾನಿಕ್ (ಡಿ.ಎಂ.ಎಂ) | 10 |
| | ಡೀಸೆಲ್ ಮೆಕ್ಯಾನಿಕ್ | 01 |
| | ಟರ್ನರ್ | 06 |
| | ಎಂ.ಎಂ.ವಿ. | 04 |
| | ವೆಲ್ಡರ್ | 08 |
| | ಸರ್ವೆಯರ್ | 01 |
| | ಸ್ಯೂಯಿಂಗ್ & ಟೆಕ್ನಾಲಜಿ | 03 |
| | ಕಿರಿಯ ತರಬೇತಿ ಅಧಿಕಾರಿ (ಕಾರ್ಯಗಾರ ಲೆಕ್ಕ & ವಿಜ್ಞಾನ & ಇಂಜಿನೀಯರಿಂಗ್ ಡ್ರಾಯಿಂಗ್) | 14 |
| | ಡ್ರಾಫ್ಟ್‌ಮೆನ್ ಸಿವಿಲ್ (ಡಿ.ಎಂ.ಸಿ) | 05 |
| | ಟ್ರ್ಯಾಕ್ಟರ್ ಮೆಕ್ಯಾನಿಕ್ | 01 |
| | ಎಂ.ಆರ್.ಎ.ಸಿ | 01 |
| | **ಒಟ್ಟು ಕಿರಿಯ ತರಬೇತಿ ಅಧಿಕಾರಿಗಳ ಖಾಲಿ ಹುದ್ದೆ** | **131** |
| **ಖಾಸಗಿ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕೇತರ ಹುದ್ದೆಗಳ ವಿವರ** | | |
| 4 | ಕಛೇರಿ ಅಧೀಕ್ಷಕರು | 5 |
| 5 | ಪ್ರಥಮ ದರ್ಜೆ ಸಹಾಯಕರು | 17 |
| 6 | ದ್ವಿತೀಯ ದರ್ಜೆ ಸಹಾಯಕರು | 10 |

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.